"ಮಧುರ ಮುದ್ದು ಮಕ್ಕಳೇ - ತಂದೆಯು ನಿಮಗೋಸ್ಕರ ಸ್ವರ್ಗದ ಹೊಸ ಪ್ರಪಂಚದ ಸ್ಥಾಪನೆ ಮಾಡಲು ಬಂದಿದ್ದಾರೆ, ಆದ್ದರಿಂದ ಈ ನರಕದೊಂದಿಗೆ ಮನಸ್ಸಿಡಬೇಡಿ, ಇದನ್ನು ಮರೆಯುತ್ತಾಹೋಗಿ"

ಪ್ರಶ್ನೆ: ದಯಾಹೃದಯಿ ತಂದೆಯು ತಾವು ಮಕ್ಕಳ ಮೇಲೆ ಯಾವ ರೂಪದಿಂದ ಯಾವ ದಯೆ ತೋರಿಸುತ್ತಾರೆ?

ಉತ್ತರ: ತಂದೆಯು ತಿಳಿಸುತ್ತಾರೆ - ನಾನು ತಂದೆಯ ರೂಪದಿಂದ ಮಧುರ ಸಾಕ್ರೀನ್ ಆಗಿ ನೀವು ಮಕ್ಕಳಿಗೆ ಎಷ್ಟೊಂದು ಪ್ರೀತಿಯನ್ನು ಕೊಡುತ್ತೇನೆ, ಅದನ್ನು ಪ್ರಪಂಚದಲ್ಲಿ ಬೇರೆ ಯಾರೂ ಕೊಡಲು ಸಾಧ್ಯವಿಲ್ಲ. ನಾನು ನಿಮ್ಮನ್ನು ಪವಿತ್ರ ಪ್ರೀತಿಯ ಪ್ರಪಂಚದ ಮಲೀಕರನ್ನಾಗಿ ಮಾಡಿಬಿಡುತ್ತೇನೆ. ಶಿಕ್ಷಕನಾಗಿ ನಿಮಗೆ ಇಂತಹ ವಿದ್ಯೆಯನ್ನು ಓದಿಸುತ್ತೇನೆ ಅದರಿಂದ ನೀವು ಸ್ವರ್ಗದ ದೇವಿಯರಾಗಿಬಿಡುತ್ತೀರಿ. ಈ ವಿದ್ಯೆಯು ಮನುಷ್ಯರಿಂದ ದೇವತೆಗಳಾಗುವುದಾಗಿದೆ. ಈ ಜ್ಞಾನರತ್ನಗಳು ನಿಮ್ಮನ್ನು ವಿಶ್ವದ ಮಾಲೀಕರನ್ನಾಗಿ ಮಾಡಿಬಿಡುತ್ತದೆ.

ಗೀತೆ: ಯಾರು ತಂದೆ, ಯಾರು ತಾಯಿಯಾಗಿದ್ದಾರೆ.........

ಓಂ ಶಾಂತಿ. ಮಕ್ಕಳಿಗೆ ಓಂ ಶಾಂತಿಯ ಅರ್ಥವನ್ನು ತಿಳಿಸಲಾಗುತ್ತದೆ – ಓಂ ನ ಅರ್ಥವಾಗಿದೆ - ನಾನು ಆತ್ಮ (ಐ ಯಾಮ್ ಸೋಲ್), ನಾನಾತ್ಮ ನಿರಾಕಾರ ಪರಮಾತ್ಮನ ಸಂತಾನನಾಗಿದ್ದೇನೆ. ಶರೀರದ ತಂದೆ ಅವರಾಗಿದ್ದಾರೆ, ಯಾರು ಜನ್ಮವನ್ನು ಕೊಟ್ಟಿದ್ದಾರೆ, ಅವರಿಗೆ ಶರೀರಕ್ಕೆ ಜನ್ಮ ಕೊಡುವ ತಂದೆ ಎಂದು ಹೇಳಲಾಗುತ್ತದೆ ಮತ್ತು ಶಿವತಂದೆಯು ಆತ್ಮಗಳ ತಂದೆಯಾಗಿದ್ದಾರೆ. ಅನೇಕಾನೇಕ ಕೋಟ್ಯಾಂತರ ಆತ್ಮಗಳು ತಮ್ಮ ನಿರಾಕಾರಿ ಪ್ರಪಂಚದಲ್ಲಿರುತ್ತಾರೆ ಅಲ್ಲಿ ಸದಾ ನಿರ್ವಿಕಾರಿಗಳಾಗಿಯೇ ಇರುತ್ತಾರೆ, ವಿಕಾರಿಗಳಂತೂ ಪರಮಧಾಮದಲ್ಲಿರಲು ಸಾಧ್ಯವಿಲ್ಲ. ಮೊದಲಂತೂ ಈ ಮಾತನ್ನು ಪಕ್ಕಾ ಮಾಡಿಕೊಳ್ಳಬೇಕು - ನಾನಾತ್ಮ, ನನ್ನ ತಂದೆ ಪರಮಾತ್ಮ. ಆತ್ಮನ ಸಂಬಂಧಿಗಳೆಲ್ಲರೂ ಸಹೋದರ-ಸಹೋದರರಾಗಿದ್ದಾರೆ. ಈ ಶರೀರದ ತಂದೆಯನ್ನು ಲೌಕಿಕ ತಂದೆಯೆಂದು ಕರೆಯಲಾಗುತ್ತದೆ. ಆತ್ಮನ ತಂದೆಯನ್ನು ಪಾರಲೌಕಿಕ ತಂದೆಯೆಂದು ಕರೆಯಲಾಗುತ್ತದೆ, ಅವರು ಎಲ್ಲಾ ಆತ್ಮಗಳ ಒಬ್ಬರೇ ತಂದೆಯಾಗಿದ್ದಾರೆ. ಓ ಗಾಡ್ ಫಾದರ್, ಓ ಪತಿತ-ಪಾವನ, ದಯಾಹೃದಯಿ ಎಂದು ಕರೆಯಲಾಗುತ್ತಾರಲ್ಲವೆ. ಈ ಆತ್ಮವು ತಂದೆಯನ್ನು ಕರೆಯಿತು, ಆತ್ಮವು ಈ ಶರೀರದ ಜೊತೆ ದುಃಖಿಯಾಗಿದೆ ನಂತರ ಸತ್ಯಯುಗದಲ್ಲಿ ಆತ್ಮಕ್ಕೆ ಶರೀರದ ಜೊತೆ ಸುಖವಿರುತ್ತದೆ ಆದ್ದರಿಂದ ಅದರ ಹೆಸರೇ ಸುಖಧಾಮ, ಸ್ವರ್ಗವಾಗಿದೆ. ಇದು ನರಕವಾಗಿದೆ. ಗಾಯನವೂ ಇದೆಯಲ್ಲವೆ - ದುಃಖದಲ್ಲಿ ಎಲ್ಲರೂ ಸ್ಮರಣೆ ಮಾಡುತ್ತಾರೆ, ಸುಖದಲ್ಲಿ ಯಾರು ಮಾಡುವುದಿಲ್ಲ....ಪತಿತ-ಪಾವನರನ್ನೇ ನೆನಪು ಮಾಡುತ್ತಾರೆ. ಪತಿತ-ಪಾವನ ತಂದೆಯು ಮೇಲೆ ಪರಮಧಾಮದಲ್ಲಿರುತ್ತಾರೆಂದು ತಿಳಿಯುತ್ತಾರೆ. ಗಂಗೆಯನ್ನು ಪತಿತಪಾವನಿ ಎಂದು ಕರೆಯುವುದಿಲ್ಲ. ಗಂಗೆಯನ್ನಂತೂ ಈ ಕಣ್ಣುಗಳಿಂದ ನೋಡಲಾಗುತ್ತದೆ. ನಿರಾಕಾರ ತಂದೆಯನ್ನು ಅಥವಾ ಆತ್ಮನನ್ನು ನೋಡಲು ಸಾಧ್ಯವಿಲ್ಲ. ಪರಮಪಿತ ಪರಮಾತ್ಮ ಪ್ರಾಣದಾತ, ಅವರು ದಿವ್ಯಚಕ್ಷು ವಿದಾತನಾಗಿದ್ದಾರೆ, ಅವರನ್ನೇ ಓ ಗಾಡ್ ಫಾದರ್, ರಚಯಿತನೆಂದು ಹೇಳಲಾಗುತ್ತದೆ ಅಂದಾಗ ಮತ್ತೆ ತಾಯಿ ಎಲ್ಲಿಂದ ಬಂದರು? ತಾಯಿಯಿಲ್ಲದೆ ತಂದೆಯು ಸೃಷ್ಟಿಯ ರಚನೆಯನ್ನು ಹೇಗೆ ರಚಿಸಿದರು. ತಾಯಿಯಂತೂ ಅವಶ್ಯವಾಗಿ ಬೇಕಲ್ಲವೆ. ಪರಮಾತ್ಮನು ಮನುಷ್ಯಸೃಷ್ಟಿಯ ರಚಯಿತನಾಗಿದ್ದಾರೆ, ಅವರು ಎಲ್ಲರ ತಂದೆಯಾಗಿದ್ದಾರೆ. ತಂದೆ ಇದ್ದಾರೆಂದ ಮೇಲೆ ತಾಯಿಯು ಅವಶ್ಯವಾಗಿ ಇರುವವರು. ತಂದೆಯು ಬಂದು ತಿಳಿಸುತ್ತಾರೆ - ನಾನಂತೂ ನಿರಾಕಾರನಾಗಿದ್ದೇನೆ. ನಾನು ಬಂದು ಯಾವಾಗ ಮದುವೆ ಮಾಡಿಕೊಳ್ಳುತ್ತೇನೆ ಆಗ ಮಕ್ಕಳಾಗುತ್ತಾರೆ. ಆದರೆ ಮದುವೆಯನ್ನಂತೂ ಮಾಡಿಕೊಳ್ಳಬೇಕಾಗಿಲ್ಲ. ಮದುವೆ ಇಲ್ಲದೆ ಮಕ್ಕಳಿಗೆ ಜನ್ಮ ಕೊಡಬೇಕಾಗಿದೆ. ಅಂದಾಗ ಮಕ್ಕಳನ್ನು ನಾನು ದತ್ತು ಮಾಡಿಕೊಳ್ಳುತ್ತೇನೆ. ತಿಳಿಯಿರಿ - ಯಾರಿಗಾದರೂ ಸ್ತ್ರೀ ಇಲ್ಲ ಅಂದಾಗ ತನ್ನ ಸಂಪತ್ತನ್ನು ಯಾರಿಗೆ ಕೊಡುವುದು ಎಂದು ಬಯಸುತ್ತಾರೆ? ನಂತರ ದತ್ತು ಮಗುವನ್ನಾಗಿ ಮಾಡಿಕೊಳ್ಳುತ್ತಾರೆ. ದತ್ತು ಮಾಡಿಕೊಳ್ಳುತ್ತಾರೆಂದರೆ ತಾಯಿ-ತಂದೆ ಇಬ್ಬರು ಆದರಲ್ಲವೆ ಅಂದಾಗ ಬೇಹದ್ದಿನ ತಂದೆಯು ತಿಳಿಸುತ್ತಾರೆ ನಾನೂ ಸಹ ತಂದೆ ಆಗಿದ್ದೇನೆ, ನಾನು ಹೇಗೆ ರಚಿಸಲಿ? ತಿಳುವಳಿಕೆಯ ಮಾತಾಗಿದೆಯಲ್ಲವೆ. ನನಗಂತೂ ಶರೀರವು ಬೇಕಲ್ಲವೇ ಆದ್ದರಿಂದ ಇವರ ಶರೀರದ ಆಧಾರವನ್ನು ತೆಗೆದುಕೊಳ್ಳುತ್ತೇನೆ ಎಂದು ತಂದೆಯು ಸ್ವಯಂ ಬಂದು ತಿಳಿಸುತ್ತಾರೆ. ನಾವೀಗ ಈಶ್ವರೀಯ ಸಂತಾನರಾಗಿದ್ದೇವೆ ಎಂದು ನೀವು ಹೇಳುತ್ತೀರಿ. ಈಶ್ವರನ ಸಂತಾನರಂತೂ ಎಲ್ಲರೂ ಆಗಿದ್ದಾರೆ. ಆದರೆ ಈ ಸಮಯದಲ್ಲಿ ತಂದೆಯು ಸಮ್ಮುಖದಲ್ಲಿ ಬಂದಿದ್ದಾರೆ. ನೀವು ಮಕ್ಕಳನ್ನು ಮಡಿಲಿಗೆ ತೆಗೆದುಕೊಳ್ಳುತ್ತಾರೆ. ನಾವು ತಂದೆಗೆ ಮಕ್ಕಳಾಗಿದ್ದೇವೆ ಎಂದು ನೀವು ತಿಳಿದಿದ್ದೀರಿ. ತಂದೆಯು ಸ್ವರ್ಗದ ರಚಯಿತನಾಗಿದ್ದಾರೆ, ಸ್ವರ್ಗದ ಮಾಲೀಕರನ್ನಾಗಿ ಮಾಡಲು ರಾಜಯೋಗವನ್ನು ಕಲಿಸುತ್ತಾರೆ, ನಾನು ನಿರಾಕಾರ ಭಗವಂತನಾಗಿದ್ದೇನೆ ಎಂದು ಅವರೇ ಕುಳಿತು ತಿಳಿಸುತ್ತಾರೆ. ನಿರಾಕಾರನನ್ನು ಮನುಷ್ಯ ಸೃಷ್ಟಿಯ ರಚಯಿತನೆಂದು ಹೇಗೆ ಹೇಳುತ್ತೀರಿ ಅಂದಾಗ ಮಕ್ಕಳನ್ನು ದತ್ತು ಮಾಡಿಕೊಂಡು ಅವರಿಗೆ ಕುಳಿತು ತಿಳಿಸುತ್ತಾರೆ - ನಾನು ಶಿವ ನಿರಾಕಾರನಾಗಿದ್ದೇನೆ. ನೀವೂ ಸಹ ನಿರಾಕಾರ ಆತ್ಮಗಳಾಗಿದ್ದೀರಿ, ಆದರೆ ನೀವು ಗರ್ಭ ಜೈಲಿನಲ್ಲಿ ಬರುತ್ತೀರಿ, ನಾನು ಗರ್ಭಜೈಲಿನಲ್ಲಿ ಬರುವುದಿಲ್ಲ.

ನಿಮಗೋಸ್ಕರ ಅರ್ಧಕಲ್ಪ ಗರ್ಭಮಹಲ್ ಇರುತ್ತದೆ ಮತ್ತು ಅರ್ಧಕಲ್ಪ ಗರ್ಭಜೈಲಿರುತ್ತದೆ ಏಕೆಂದರೆ ಮಾಯಾರಾವಣನು ಅರ್ಧಕಲ್ಪ ಪಾಪ ಮಾಡಿಸುತ್ತಾನೆ, ಸತ್ಯಯುಗದಲ್ಲಿ ಪತಿತ, ದುಃಖಿಗಳನ್ನಾಗಿ ಮಾಡಲು ಮಾಯೆಯೇ ಇರುವುದಿಲ್ಲ. ನಾನು 21 ಜನ್ಮಗಳಿಗೋಸ್ಕರ ನಿಮಗೆ ಸ್ವರ್ಗದ ಆಸ್ತಿಯನ್ನು ಕೊಡುತ್ತೇನೆ. ಸ್ವರ್ಗಕ್ಕೆ ಹೊಸಪ್ರಪಂಚವೆಂದು ಕರೆಯಲಾಗುವುದು. ಮನೆಯೂ ಸಹ ಹಳೆಯದಾದಾಗ ಹಳೆಯದನ್ನು ಬಿಟ್ಟು ಹೊಸದರಲ್ಲಿ ಹೋಗುತ್ತಾರೆ. ಅದೇ ರೀತಿ ಇದೂ ಸಹ ಹಳೆಯ ಪ್ರಪಂಚವಾಗಿದೆಯಲ್ಲವೆ. ಅದು ಹೊಸಪ್ರಪಂಚ, ಸತ್ಯಯುಗ, ಪಾವನ ಪ್ರಪಂಚವಾಗಿದೆ ಆದ್ದರಿಂದ ತಂದೆಯು ತಿಳಿಸುತ್ತಾರೆ - ಮುದ್ದಾದ ಮಕ್ಕಳೇ, ನಾನು ನಿಮಗೋಸ್ಕರ ಸ್ವರ್ಗದ ಸ್ಥಾಪನೆ ಮಾಡುತ್ತಿದ್ದೇನೆ ಅಂದಮೇಲೆ ನೀವು ಮತ್ತೆ ನರಕದೊಂದಿಗೆ ಮನಸ್ಸನ್ನೇಕೆ ಇಡುತ್ತೀರಿ? ಈಗ ನರಕವನ್ನು ಮರೆತುಬಿಡಿ. ತಂದೆಯಾದ ನನ್ನನ್ನು ಮತ್ತು ಸ್ವರ್ಗವನ್ನು ನೆನಪು ಮಾಡಿ, ಹಳೆಯ ಪ್ರಪಂಚವನ್ನು ಮರೆಯುತ್ತಾ ಹೋಗಿ. ಇದು ಬೇಹದ್ದಿನ ಸನ್ಯಾಸವಾಗಿದೆ. ಹಳೆಯ ದೇಹಸಹಿತವಾಗಿ ಏನೆಲ್ಲವನ್ನೂ ನೋಡುತ್ತೀರೋ ಅದೆಲ್ಲದರ ಮಮತ್ವವನ್ನು ಬಿಡಿ. ನಾವು ಎಲ್ಲವನ್ನು ಈಶ್ವರನಿಗೆ ಕೊಡುತ್ತೇವೆಂದು ತಿಳಿಯಿರಿ. ಈ ಶರೀರ, ಹಣ, ಅಧಿಕಾರ, ಮಕ್ಕಳು ಇತ್ಯಾದಿಗಳೆಲ್ಲವೂ ಸಮಾಪ್ತಿಯಾಗಿಬಿಡಲಿವೆ. ಇದು ಅದೇ ಮಹಾಭಾರತ ಯುದ್ಧವಾಗಿದೆ, ಇದರ ಮುಖಾಂತರ ಮುಕ್ತಿ-ಜೀವನ್ಮುಕ್ತಿಯ ದ್ವಾರಗಳು ತೆರೆಯಲಿವೆ. ಹರಿದ್ವಾರವೆಂದು ಹೇಳುತ್ತಾರಲ್ಲವೆ. ಕೃಷ್ಣನಿಗೆ ಹರಿ ಎಂದು ಹೇಳುತ್ತಾರೆ. ಕೃಷ್ಣನ ದ್ವಾರವು ವೈಕುಂಠವಾಗಿದೆ. ವೈಕುಂಠದ ಬಾಗಿಲನ್ನು ತಂದೆಯು ಬಂದು ತೆರೆಯುತ್ತಾರೆ. ಅಲ್ಲಿ ಯಾವುದೇ ಪತಿತರು ಹೋಗಲು ಸಾಧ್ಯವಿಲ್ಲ ಆದ್ದರಿಂದಪತಿತರಿಂದ ಪಾವನರನ್ನಾಗಿ ಮಾಡುತ್ತಾರೆ, ದುಃಖದಿಂದ ಬಿಡಿಸುತ್ತಾರೆ. ಮತ್ಯಾರೂ ಬಿಡಿಸಲು ಸಾಧ್ಯವಿಲ್ಲ. ದುಃಖಹರ್ತ-ಸುಖಕರ್ತ ತಂದೆಯೇ ಆಗಿದ್ದಾರೆ. ತಂದೆಯು ಹೇಳುತ್ತಾರೆ - ನಾನು ನಿಮಗೆ ರಾಜಯೋಗವನ್ನು ಕಲಿಸುತ್ತೇನೆ. ಸದಾಕಾಲಕ್ಕೋಸ್ಕರ ಸುಖ ಕೊಡಲು ಬಂದಿದ್ದೇನೆ. ನಾನು ನಿಮಗೋಸ್ಕರ ಅಂಗೈಯಲ್ಲಿ ಸ್ವರ್ಗವನ್ನು ತಂದಿದ್ದೇನೆ. ನೀವು ರಾಜಯೋಗವನ್ನು ಕಲಿತು ಮನುಷ್ಯರಿಂದ ದೇವತೆಗಳಾಗುತ್ತೀರಿ. ಅವಶ್ಯವಾಗಿ ಇವು ತಿಳಿದುಕೊಳ್ಳುವ ಮಾತುಗಳೆಂದು ಬುದ್ಧಿಯು ಹೇಳುತ್ತದೆ. ತಿಳಿದುಕೊಳ್ಳಿ, ಈ ಹಳೆಯ ಪ್ರಪಂಚವು ಮತ್ತೆ ಹೊಸದಾಗುವುದು. ಸರ್ವಶಕ್ತಿವಂತ ಒಬ್ಬರೇ ತಂದೆಯಾಗಿದ್ದಾರೆ. ಅವರು ತಮ್ಮ ಶಕ್ತಿಯಿಂದ ಸ್ವರ್ಗದ ಮಾಲೀಕರನ್ನಾಗಿ ಮಾಡುತ್ತಾರೆ. ಒಂದು ರಾಜ್ಯವಿರಲಿ, ಏಕಚಕ್ರಾಧಿಪತ್ಯ ರಾಜ್ಯವಿರಲೆಂದು ಬಯಸುತ್ತಾರೆ. ಅಂದಾಗ ಸತ್ಯಯುಗ-ತ್ರೇತಾಯುಗದಲ್ಲಿ ಅಟಲ, ಅಖಂಡ, ಸುಖ-ಶಾಂತಿಮಯ ದೇವಿ-ದೇವತೆಗಳ ರಾಜಧಾನಿಯಿತ್ತು, ಯಾವುದೇ ವಿಘ್ನವಿರಲಿಲ್ಲ ಅದನ್ನು ಅದ್ವೈತರಾಜ್ಯವೆಂದುದು ಕರೆಯಲಾಗುತ್ತದೆ. ದುಃಖಿಯಾಗಲು ಅನ್ಯಧರ್ಮವೇ ಇರಲಿಲ್ಲ ಈಗ ನೋಡಿ ಬಹಳ ಕ್ರಿಶ್ಚಿಯನ್ನರು ಒಂದೆ ಧರ್ಮದವರಿರಬಹುದು ಆದರೆ ಅವರ ಮಧ್ಯೆಯೂ ಸಹ ಬಹಳ ಯುದ್ಧವಾಗುತ್ತದೆ ಏಕೆಂದರೆ ಮಾಯೆಯ ರಾಜ್ಯವಾಗಿದೆ. ಸತ್ಯಯುಗದಲ್ಲಿ ಮಾಯೆಯಿರುವುದಿಲ್ಲ. ಈಗ ಹೇಳುತ್ತಾರೆ- ಈ ಗಾಡ್ಫಾದರ್ ದಯೆ ತೋರಿಸಿ. ತಂದೆಯು ತಿಳೀಸುತ್ತಾರೆ - ದಯೆಯನ್ನಂತೂ ಎಲ್ಲರ ಮೇಲೂ ತೋರಿಸುತ್ತೇನೆ. ಎಲ್ಲಾ ಮಕ್ಕಳನ್ನು ಪಾಪಗಳಿಂದ ಮುಕ್ತ ಮಾಡುತ್ತೇನೆ ಅರ್ಥಾತ್ ಪತಿತ ಪ್ರಪಂಚದಿಂದ ಮುಕ್ತ ಮಾಡುತ್ತೇನೆ. ನೀವೆಲ್ಲಾ ಆತ್ಮಗಳನ್ನು ನಿರಾಕಾರಿ ಪ್ರಪಂಚದಲ್ಲಿ ಕರೆದುಕೊಂಡು ಹೋಗುತ್ತೇನೆ. ಬಾಕಿ ಶರೀರವಂತೂ ಭಸ್ಮವಾಗಿಬಿಡುತ್ತದೆ. ಪ್ರಾಕೃತಿಕ ಆಪತ್ತುಗಳಿದೆ ಎಂದು ಗಾಯನವಿದೆ. ಅದರ ಮುನ್ಸೂಚನೆಯನು ನೋಡುತ್ತಿದ್ದೀರಿ. ಚಂಡಮಾರುತಗಳು ಅವಶ್ಯವಾಗಿ ಬರಲಿದೆ.

ಈಗ ತಂದೆಯು ತಿಳಿಸುತ್ತಾರೆ- ಈ ಪತಿತಪ್ರಪಂಚದಿಂದ ಮಮತ್ವವನ್ನು ತೆಗೆಯಿರಿ, ಈ ಬೇಹದ್ದಿನ ತಂದೆಯು ಅತೀ ಮಧುರರಾಗಿದ್ದಾರೆ ಮತ್ತು ತಿಳಿಸುತ್ತಾರೆ- ನಾನು ನಿಮಗೆ ಹೇಗೆ ಪ್ರೀತಿಯನ್ನು ಮಾಡುತ್ತೇನೆ ಅದನ್ನು ಯಾರೂ ಮಾಡಲು ಸಾಧ್ಯವಿಲ್ಲ. ಈಗ ನಿಮ್ಮನ್ನು ಪವಿತ್ರ ಪ್ರಪಂಚದ ಮಾಲೀಕರನ್ನಾಗಿ ಮಾಡುತ್ತೇನೆ. ನೀವು ರಾಜ್ಯಭಾಗ್ಯಕ್ಕೋಸ್ಕರ ಓದುತ್ತಿದ್ದೀರಿ. ಗುರಿ-ಧ್ಯೇಯವು ಬುದ್ಧಿಯಲ್ಲಿದೆ. ಎಲ್ಲಿಯವರೆಗೆ ಯಾರಾದರೂ ಕುಳಿತು ಅವರಿಗೆ ತಿಳಿಸುವುದಿಲ್ಲವೋ ಅಲ್ಲಿಯವರೆಗೆ ಹೊಸಬರು ಏನನ್ನೂ ತಿಳಿದುಕೊಳ್ಳಲು ಸಾಧ್ಯವಿಲ್ಲ. ಮನುಷ್ಯರಿಂದ ದೇವತೆಗಳಾಗಬೇಕೆಂದು ಒಂದುವಾರ ಕುಳಿತು ತಿಳಿದುಕೊಳ್ಳಬೇಕು. ಆದ್ದರಿಂದ ತಂದೆಯನ್ನು ಜಾದೂಗಾರ್ ಎಂದು ಕರೆಯಲಾಗುತ್ತದೆ. ಜ್ಞಾನರತ್ನಗಳಿಂದ ಮನುಷ್ಯರನ್ನು ದೇವತೆಗಳನ್ನಾಗಿ ಮಾಡುತ್ತೇನೆ ಆದ್ದರಿಂದ ನನ್ನನ್ನು ರತ್ನಾಗರ್, ಸೌದಾಗರ್, ಯಾತ್ರಿಕನೆಂದು ಹೇಳುತ್ತಾರೆ. ನಾನು ಬಂದು ನಿಮ್ಮನ್ನು ಮಹಾರಾಜ-ಮಹಾರಾಣಿಯರನ್ನಾಗಿ ಮಾಡುತ್ತೇನೆಂದು ತಂದೆಯು ತಿಳಿಸುತ್ತಾರೆ, ಈ ಯಾತ್ರಿಕನು ಎಷ್ಟು ಸುಂದರರಾಗಿದ್ದಾರೆ! ನೀವು ಯಾವುದೇ ಕೆಲಸಕ್ಕೆ ಬರುತ್ತಿರಲಿಲ್ಲ, ಈಗ ನಿಮಗೆ ಓದಿಸಿ ಸ್ವರ್ಗದ ದೇವತೆಗಳನ್ನಾಗಿ ಮಾಡುತ್ತೇನೆಂದು ತಿಳಿಸುತ್ತಾರೆ. ನಿಮಗೆ ತಿಳಿದಿದೆ - ನಾವು ಈಗ ಸೂರ್ಯವಂಶಿ, ಚಂದ್ರವಂಶಿ ಯಾಗಲು ಓದುತ್ತಿದ್ದೇವೆ, ಪರಮಾತ್ಮ ಓದಿಸುತ್ತಾರೆ. ನೀವಿಲ್ಲಿ ಏನನ್ನು ಓದುತ್ತಿರಿ? ಮನುಷ್ಯರಿಂದ ದೇವತೆಗಳಾಗಲು ಓದುತ್ತಿದ್ದೇವೆ ಎಂದು ನೀವು ಹೇಳುತ್ತೀರಿ ಏಕೆಂದರೆ ಈ ಅಸುರಿ ಗುಣವುಳ್ಳ ಮನುಷ್ಯಸೃಷ್ಟಿಯು ವಿನಾಶವಾಗಲಿದೆ. ನಾನು ನಿರ್ಗುಣದಲ್ಲಿ ಯಾವುದೇ ಗುಣವಿಲ್ಲವೆಂದು ಹೇಳುತ್ತಾರೆ ಅಂದಾಗ ಅವರೇ ದಯಾಹೃದಯೀ ತಂದೆ ಕುಳಿತು ನಿಮಗೆ ಓದಿಸುತ್ತಾರೆ. ಎಲ್ಲಾ ಧರ್ಮದವರು ಒಬ್ಬ ನಿರಾಕಾರ ತಂದೆಯನ್ನೇ ಪರಮಾತ್ಮನೆಂದು ಒಪ್ಪುತ್ತಾರೆ. ಮನುಷ್ಯರು ಭಲೆ, ಪರಮಪಿತ ಪರಮಾತ್ಮನೆಂದು ಹೇಳುತ್ತಾರೆ ಆದರೆ ಅವರು ಯಾರು, ಎಲ್ಲಿಂದ ಬರುತ್ತಾರೆ? ಎಂದು ತಿಳಿದುಕೊಂಡಿಲ್ಲ. ಅವರು ಹಳೆಯ ಪತಿತ ಪ್ರಪಂಚದಲ್ಲಿ ಬರುತ್ತಾರೆಂದು ಈಗ ನಿಮಗೂ ಗೊತ್ತಿದೆ ಏಕೆಂದರೆ ಅವರು ಪಾವನಪ್ರಪಂಚವನ್ನು ಸ್ಥಾಪನೆ ಮಾಡುತ್ತಾರೆ, ಹಳೆಯ ಪ್ರಪಂಚವನ್ನು ಹೊಸಪ್ರಪಂಚವನ್ನಾಗಿ ಮಾಡುತ್ತಾರೆ. ಹೊಸಪ್ರಪಂಚದಲ್ಲಂತೂ ಸುಖವೇ ಸುಖವಿರುತ್ತದೆ. ತಂದೆಯು ತಿಳಿಸುತ್ತಾರೆ - ಹೊಸಪ್ರಪಂಚದ ಸ್ಥಾಪನೆ ಮಾಡಲು ನಾನು

ಕಲ್ಪ-ಕಲ್ಪವೂ ಬರಲೇಬೇಕಾಗಿದೆ. ಇದಂತೂ ರಾತ್ರಿಯ ನಂತರ ದಿನವೆಂದು ಬುದ್ಧಿಯಂತೂ ತಿಳಿದುಕೊಳ್ಳುತ್ತದೆ ನಂತರ ಚಕ್ರದಲ್ಲಿ ಕಲಿಯುಗವು ಬರುತ್ತದೆ. ಕಲಿಯುಗದ ನಂತರ ಮತ್ತೆ ಸತ್ಯಯುಗ ಅವಶ್ಯವಾಗಿ ಆಗುವುದಲ್ಲವೆ. ನೀವೂ ಮಕ್ಕಳನ್ನು ಸ್ವದರ್ಶನಚಕ್ರಧಾರಿಗಳೆಂದು ಹೇಳಲಾಗುತ್ತದೆ. ನಾನು 84 ಜನ್ಮಗಳನ್ನು ಹೇಗೆ ತೆಗೆದುಕೊಳ್ಳುತ್ತೇನೆ ಎಂದು ಆತ್ಮಕ್ಕೆ ಗೊತ್ತಿದೆ. ಯಾವುದೇ ಮನುಷ್ಯರಿಗೆ ಸದ್ಗತಿ ನೀಡಲು ಸಾಧ್ಯವಿಲ್ಲ. ನಾನೇ ಬಂದು ತಿಳಿಸುತ್ತೇನೆ. ನಾನು ನಿಮ್ಮನ್ನು ಪಾವನರನ್ನಾಗಿ ಮಾಡುತ್ತೇನೆ. ಯೋಗಬಲದಿಂದ ನೀವು ವಿಶ್ವದ ಮೇಲೆ ಜಯಗಳಿಸುತ್ತೀರಿ. ತಂದೆಯು ಸರ್ವಶಕ್ತಿವಂತರಾಗಿದ್ದಾರೆ. ತಂದೆಯಿಂದ ನಿಮಗೆ ಬೇಹದ್ದಿನ ಆಸ್ತಿಯು ಸಿಗುತ್ತದೆ, ಆಕಾಶ ಭೂಮಿ, ಸಾಗರ ಎಲ್ಲವೂ ನಿಮ್ಮದಾಗಿಬಿಡುವುದು. ಇಲ್ಲಂತೂ ನೋಡಿ ಆಕಾಶದಲ್ಲಿಯೂ ಪರಿಮಿತಿ ನೀರಿನಲ್ಲಿಯೂ ಪರಿಮಿತಿಯಿರುತ್ತದೆಯಲ್ಲವೆ. ನಮ್ಮ ನೀರಿನಲ್ಲಿ ನೀವು ಬರಬೇಡಿ ಎಂದು ಹೇಳುತ್ತಾರೆ ಆದರೆ ನೀವಂತೂ ಸತ್ಯಯುಗದಲ್ಲಿ ರಾಜ್ಯಮಾಡುತ್ತೀರಲ್ಲವೇ. ಸ್ವರ್ಗವೆಂದರೆ ಏನು! ಸ್ವರ್ಗವನ್ನು ಮರೆಯಲು ಸಾಧ್ಯವಿಲ್ಲ. ಮನುಷ್ಯರು ಯಾವಾಗ ಸಾಯುತ್ತಾರೆಯೋ ಆಗ ಸ್ವರ್ಗವಾಸಿಗಳಾದರು ಎಂದು ಹೇಳುತ್ತಾರೆ ಆದರೆ ಸ್ವರ್ಗವು ಎಲ್ಲಿದೆ? ಅವಶ್ಯವಾಗಿ ಇದು ನರಕವಾಗಿದೆ ಅಲ್ಲವೆ. ಎಲ್ಲಾ ಮನುಷ್ಯರು ದುಃಖಿ, ಪತಿತರಾಗಿದ್ದಾರೆ. ಈ ರಾಜ್ಯವೇ ರಾವಣನದಾಗಿದೆ. ರಾವಣನನ್ನು ಸುಡುತ್ತಿರುತ್ತಾರೆ ಆದರೆ ಅವನು ಸುಟ್ಟುಹೋಗುವುದೇ ಇಲ್ಲ. ರಾವಣನನ್ನು 100 ಅಡಿ ಎತ್ತರವಾಗಿ ಮಾಡುತ್ತಿರುತ್ತಾರೆ ಮತ್ತೆ ಹೆಚ್ಚಿಸುತ್ತಿರುತ್ತಾರೆ. ದಿನ-ಪ್ರತಿದಿನ ಇನ್ನೂ ಎತ್ತರವಾಗಿ ಮಾಡುತ್ತಾ ಇರುತ್ತಾರೆ ಆದರೆ ತಿಳಿದುಕೊಂಡಿಲ್ಲ. ಇದು ತಿಳಿದುಕೊಳ್ಳುವ ಮಾತುಗಳಾಗಿವೆ.

ಇಲ್ಲಿ ನೋಡಿ ಮುರುಳಿಯು ನುಡಿಸಲಾಗುತ್ತದೆ ಎಂದರೆ ಮತ್ತೆ ಟೇಪ್ನಲ್ಲಿಯೂ ತುಂಬಲಾಗುತ್ತದೆ ಏಕೆಂದರೆ ಗೋಪಿಕೆಯರು ಮುರುಳಿಯಿಲ್ಲದೇ ಇರಲು ಸಾಧ್ಯವಿಲ್ಲ. ಆದ್ದರಿಂದ ಈ ಪ್ರಬಂಧವಿದೆ. ಮುರುಳಿಯಿಲ್ಲದೆ ಚಡಪಡಿಸುತ್ತಾರೆ ಏಕೆಂದರೆ ಈ ಮುರುಳಿಯು ಲಂಡನ್, ಅಮೇರಿಕಾದವರೆಗೂ ಹೋಗುತ್ತದೆ. ಮಕ್ಕಳು ಕೇಳಿ ಬಹಳ ಖುಷಿಯಾಗುತ್ತಾರೆ. ಗಾಯನವೂ ಇದೆ. ಗೋಪಿಕೆಯರು ಮುರುಳಿಯಿಲ್ಲದೆ ಇರುತ್ತಿರಲಿಲ್ಲ. ಈ ಜ್ಞಾನವನ್ನು ಪರಮಾತ್ಮನೇ ತಿಳಿಸುತ್ತಾರೆ. ಮುಖ್ಯವಾಗಿ ಒಂದು ಮಾತನ್ನು ತಿಳಿಸಬೇಕಾಗಿದೆ. ಇವರು ನಮ್ಮ ಬೇಹದ್ದಿನ ತಂದೆಯಾಗಿದ್ದಾರೆ, ಇವರಿಂದ ಸ್ವರ್ಗದ ಆಸ್ತಿಯು ಸಿಗುತ್ತದೆ, ನಮ್ಮ ತಂದೆಯು ಪರಮಾತ್ಮನಾಗಿದ್ದಾರೆ, ಅವರು ಆತ್ಮಗಳಿಗೆ ಓದಿಸುತ್ತಿದ್ದಾರೆಂದು ಆತ್ಮವು ಹೇಳುತ್ತದೆ. ನಾನು ಪರಮಾತ್ಮ ನೀವಾತ್ಮಗಳಿಗೆ ಓದಿಸುತ್ತೇನೆಂದು ಹೇಳಲು ಸಾಧ್ಯವಿಲ್ಲ. ನಾನು ಪರಮಾತ್ಮ ಜ್ಞಾನಸಾಗರನಾಗಿದ್ದೇನೆ ಎಂದೂ ಸಹ ಯಾರೂ ಹೇಳಲು ಸಾಧ್ಯವಿಲ್ಲ. ನೀವು ಮಕ್ಕಳಿಗೆ ತುಂಬಾ ಚೆನ್ನಾಗಿ ತಿಳಿಸಲಾಗುತ್ತದೆ ಆದರೆ ಎಲ್ಲರ ಬುದ್ಧಿ ಏಕರಸವಾಗಿರುವುದಿಲ್ಲ.ಕೆಲವರದು ಸತೋಪ್ರಧಾನ ಬುದ್ಧಿಯಾಗಿದೆ, ಕೆಲವರದು ಸತೋ, ರಜೋ, ತಮೋ.... ಇದರಲ್ಲಿ ಶಿಕ್ಷಕರೇನು ಮಾಡುತ್ತಾರೆ? ಇವರು ವಿದ್ಯೆಯಲ್ಲಿ ಪೂರ್ಣ ಗಮನ ಕೊಡುತ್ತಿರಲಿಲ್ಲ ಎಂದು ಶಿಕ್ಷಕರು ಹೇಳುತ್ತಾರೆ. ಪರಮಾತ್ಮನು ಜ್ಞಾನಸಾಗರನಾಗಿದ್ದಾರೆ. ಹೇಗೆ ಶಿಕ್ಷಕರು ಜ್ಞಾನಪೂರ್ಣರಾಗಿರುತ್ತಾರೆ, ವಿದ್ಯಾರ್ಥಿಗಳಿಗೆ ಓದಿಸುತ್ತಾರೆ, ತನ್ನ ಸಮಾನರನ್ನಾಗಿ ಮಾಡುತ್ತಾರೆ ಹಾಗೆಯೇ ಈ ಸೃಷ್ಟಿಚಕ್ರದ ಜ್ಞಾನವು ಪರಮಾತ್ಮನ ಬಳಿಯಷ್ಟೇ ಇದೆ ಮತ್ತ್ಯಾರಿಗೂ ಗೊತ್ತಿಲ್ಲ. ತಂದೆಯೇ ಜ್ಞಾನವನ್ನು ಕಲಿಸಿ ಜ್ಞಾನಪೂರ್ಣರನ್ನಾಗಿ ಮಾಡುತ್ತಾರೆ. ತಂದೆಯು ಜ್ಞಾನಸಾಗರ, ಎಲ್ಲರಿಗಿಂತ ಶ್ರೇಷ್ಠನಾಗಿದ್ದಾರೆ. ಅವರ ನಾಮವೂ ಶ್ರೇಷ್ಠ, ಧಾಮವೂ ಶ್ರೇಷ್ಠವಾಗಿದೆ. ಬ್ರಹ್ಮ, ವಿಷ್ಣು, ಶಂಕರರು ಸೂಕ್ಷ್ಮವತನವಾಸಿಯಾಗಿದ್ದಾರೆ. ಮೂರನೇ ಹಂತದಲ್ಲಿ ಮನುಷ್ಯರಿದ್ದಾರೆ. ಮನುಷ್ಯರಲ್ಲಿಯೂ ಹಂತಗಳಿವೆ. ಸತ್ಯಯುಗದಲ್ಲಿ ಮನುಷ್ಯರ ಹಂತವು ಬಹಳ ಉನ್ನತವಾಗಿರುತ್ತದೆ. ಸತ್ಯಯುಗವಿದ್ದಾಗ ತ್ರೇತಾಯುಗವಿಲ್ಲ. ದ್ವಾಪರಯುಗವಿದ್ದಾಗ ಕಲಿಯುಗವಿರುವುದಿಲ್ಲ. ಇವೆಲ್ಲಾ ಮಾತುಗಳನ್ನು ಬುದ್ಧಿಯಲ್ಲಿಟ್ಟುಕೊಳ್ಳಬೇಕಾಗಿದೆ ಆದ್ದರಿಂದ ಚಿತ್ರಗಳನ್ನು ಮಾಡಿದ್ದೇವೆ. ಸತ್ಯಯುಗದಲ್ಲಿ ಬಹಳ ಕಡಿಮೆ ಮನುಷ್ಯರಿರುತ್ತಾರೆ. ಆದರೆ ಕಲಿಯುಗದಲ್ಲಂತೂ ಮನುಷ್ಯರಿದ್ದಾರೆ. ಬಾಬಾ, ಯಾವಾಗ ವಿನಾಶವಾಗುವುದು ಎಂದು ಕೇಳುತ್ತಾರೆ. ನಾಟಕವು ಪೂರ್ಣ ಆದಾಗ ವಿನಾಶವಾಗುತ್ತದೆ, ಎಲ್ಲರೂ ಹೊರಟುಹೋಗುತ್ತೀರಿ. ತಂದೆಯು ಮುಕ್ತಿ-ಜೀವನ್ಮುಕ್ತಿಯ ಮಾರ್ಗದರ್ಶಕನಾಗಿದ್ದಾರೆ. ಅವರು ಪರಮಧಾಮದಲ್ಲಿರುತ್ತಾರೆ, ನೀವೂ ಸಹ ಅಲ್ಲಿರುವವರಾಗಿದ್ದೀರಿ, ಇಲ್ಲಿ ಪಾತ್ರವನ್ನಭಿನಯಿಸಲು ಬಂದಿದ್ದೀರಿ. ತಂದೆಯು ತಿಳಿಸುತ್ತಾರೆ - ಮಕ್ಕಳೇ, ನೀವು ಮಾ0iÉ◌ುಯ ಮೇಲೆ ಜಯಗಳಿಸಬೇಕಾಗಿದೆ. ಇದರಲ್ಲಿ ಹಿಂಸೆಯ ಯಾವುದೇ ಮಾತಿಲ್ಲ. ಸತ್ಯಯುಗದಲ್ಲಿ ಹಿಂಸೆಯಿರುವುದಿಲ್ಲ. ಅಲ್ಲಿ ಸಂಪೂರ್ಣ ನಿರ್ವಿಕಾರಿ ದೇವಿ-ದೇವತೆಗಳೇ ಇರುತ್ತಾರೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಬುದ್ಧಿಯಿಂದ ಬೇಹದ್ದಿನ ಸನ್ಯಾಸ ಮಾಡಬೇಕಾಗಿದೆ. ಹಳೆಯ ದೇಹ ಸಹಿತ ಈ ಕಣ್ಣುಗಳಿಗೆ ಏನೆಲ್ಲವೂ ಕಾಣಿಸುತ್ತದೆಯೋ ಅದೆಲ್ಲದರಿಂದ ಮಮತ್ವವನ್ನು ತೆಗೆದು ತಂದೆ ಮತ್ತು ಸ್ವರ್ಗವನ್ನು ನೆನಪು ಮಾಡಬೇಕಾಗಿದೆ.

2. ವಿದ್ಯೆಯನ್ನು ಚೆನ್ನಾಗಿ ಧಾರಣೆ ಮಾಡಿ ಬುದ್ಧಿಯನ್ನು ಸತೋಪ್ರಧಾನ ಮಾಡಿಕೊಳ್ಳಬೇಕಾಗಿದೆ. ಮುರಳಿಯೇ ವಿದ್ಯೆಯಾಗಿದೆ.

ಮುರಳಿಯ ಮೇಲೆ ಬಹಳ-ಬಹಳ ಗಮನವನ್ನು ಇಡಬೇಕು.

ವರದಾನ: ಭಾಗ್ಯದ ಹೊಸ-ಹೊಸ ಸ್ಮೃತಿಗಳ ಮೂಲಕ ಪುರುಷಾರ್ಥದಲ್ಲಿ ರಮಣೀಕತೆಯ ಅನುಭವ ಮಾಡುವಂತಹ ಮನ್ದುರಸ್ತ್ (ಮನಸ್ಸಿನಿಂದ ಆರೋಗ್ಯವಂತ) ಭವ.

ಬ್ರಾಹ್ಮಣ ಜೀವನದಲ್ಲಿ ಅಂತಿಮ ಜನ್ಮದಲ್ಲಿರುವ ಕಾರಣದಿಂದ, ಶರೀರದಿಂದ ಭಲೆ ಎಷ್ಟಾದರೂ ಬಲಹೀನತೆ ಅಥವಾ ರೋಗವಿರಬಹುದು, ಆದರೆ ಎಲ್ಲರ ಮನಸ್ಸು ಆರೋಗ್ಯವಂತನಾಗಿದೆ. ಉಮ್ಮಂಗ-ಉತ್ಸಾಹದಿಂದ ಹಾರುವವರಾಗಿದ್ದಾರೆ. ಶಕ್ತಿಶಾಲಿ ಮನಸ್ಸಿನ ಚಿಹ್ನೆಯಾಗಿದೆ - ಸೆಕೆಂಡಿನಲ್ಲಿ ಎಲ್ಲಿ ಬೇಕು ಅಲ್ಲಿಗೆ ತಲುಪಿ ಬಿಡುವುದು. ಇದಕ್ಕಾಗಿ ಸದಾ ತಮ್ಮ ಭಾಗ್ಯದ ಗೀತೆಯನ್ನು ಹಾಡುತ್ತಾ ಹಾರುತ್ತಿರಿ. ಅಮೃತವೇಳೆಯಿಂದ ಭಾಗ್ಯದ ಹೊಸ-ಹೊಸ ಮಾತುಗಳನ್ನು ಸ್ಮೃತಿಯಲ್ಲಿ ತಂದುಕೊಳ್ಳಿರಿ. ಕೆಲವೊಮ್ಮೆ ಕೆಲವು ಪ್ರಾಪ್ತಿಯನ್ನು ಮುಂದಿಟ್ಟುಕೊಳ್ಳಿರಿ, ಕೆಲವೊಮ್ಮೆ ಕೆಲವು..... ಅದರಿಂದ ಪುರುಷಾರ್ಥದಲ್ಲಿ ರಮಣೀಕತೆ ಬರುತ್ತದೆ. ಬೇಸರವಾಗುವುದಿಲ್ಲ, ನವೀನತೆಯ ಅನುಭವವನ್ನು ಮಾಡುವಿರಿ.

ಸ್ಲೋಗನ್: ಹಿಂದೆ-ಮುಂದೆ ಯೋಚಿಸಿ, ತಿಳಿದುಕೊಂಡು ಪ್ರತೀ ಕರ್ಮವನ್ನು ಮಾಡುವಿರೆಂದರೆ ಸಫಲತೆಯ ಪ್ರಾಪ್ತಿಯಾಗುತ್ತಿರುತ್ತದೆ.